‘ಟಗರು’ ಸಿನಿಮಾದಲ್ಲಿ ಕಾನ್ಸ್ಟೆಬಲ್ ಸರೋಜಾ ಪಾತ್ರದಲ್ಲಿ ನಟಿಸುವ ಅವಕಾಶವೂ ಬಂದಿತ್ತಂತೆ. ಆಗ ಬೇರೆ ಸಿನಿಮಾ ಚಿತ್ರೀಕರಣದಲ್ಲಿ ಬ್ಯುಸಿ ಇದ್ದಿದ್ದರಿಂದ ಆ ಪಾತ್ರ ಮಾಡಲು ಸಾಧ್ಯವಾಗಲಿಲ್ಲ. ಆ ಕುರಿತು ಈಗಲೂ ಅವರಿಗೆ ಕೊರಗಿದೆ.

‘ಬೈಕೊಂಡಾದ್ರೂ ಸರಿ, ಜನ ನನ್ನ ಪಾತ್ರವನ್ನು ಗುರ್ತಿಸಬೇಕು’ ಎನ್ನುವ ಕಾವ್ಯಾ ಅವರಿಗೆ ವಿಲನ್ ಪಾತ್ರಗಳೆಂದರೆ ತುಂಬ ಇಷ್ಟ. ‘ನನ್ನ ಸ್ನೇಹಿತರೆಲ್ಲ, ನೀನು ಸಿಕ್ಕಾಪಟ್ಟೆ ಹಾರ್ಡ್, ರಫ್ ಆಗಿ ಮಾತಾಡ್ತೀಯಾ ಅಂತ ಹೇಳ್ತಿರ್ತಾರೆ. ಹಾಗಾಗಿ ನಾನು ವಿಲನ್ ಪಾತ್ರಕ್ಕೆ ಹೆಚ್ಚು ಸೂಟ್ ಆಗ್ತೀನಿ ಅನ್ನಿಸತ್ತೆ’ ಎಂದು ನಗುವ ಅವರ ಖಳನಟಿಯಾಗುವ ಹಂಬಲದ ಹಿಂದೆ ಇನ್ನೊಂದು ಕಾರಣವೂ ಇದೆ. ‘ಖಳನಟಿಯಾದರೆ ಬಗೆಬಗೆಯ ಬಟ್ಟೆಗಳನ್ನು ಹಾಕಿಕೊಳ್ಳಬಹುದು. ಓವರ್ ಆಗಿ ಮೇಕಪ್ ಮಾಡಿಕೊಳ್ಳಬಹುದು. ಜನರು ಗಮನಿಸುವ ಹಾಗೆ ನಟಿಸಬಹುದು’ ಎನ್ನುವುದೇ ಆ ಇನ್ನೊಂದು ಕಾರಣ.

‘ಮಂಡ್ಯದ ಜನ ಎಷ್ಟು ಕಲರ್ ಇರ್ತಾರೋ ಅಷ್ಟು ಕಲರ್ ಇದೀನಿ ನಾನು’ ಎಂದು ನೇರವಾಗಿಯೇ ಹೇಳುವ ಕಾವ್ಯಾ, ‘ನಮ್ಮಲ್ಲಿ ಮುಂಬೈ, ಹೈದರಾಬಾದ್‌ಗಳಿಂದ ಫ್ಲೈಟ್ ಚಾರ್ಜ್ ಕೊಟ್ಟು ನಟಿಯರನ್ನು ಕರೆಸ್ತಾರೆ. ಯಾಕೆ ನಮ್ಮಲ್ಲಿ ಒಳ್ಳೆಯ ನಟಿಯರಿಲ್ವಾ? ನಾವು ತುಂಬ ಜನ ಅವಕಾಶಕ್ಕಾಗಿ ಕಾಯುತ್ತಿದ್ದೇವೆ. ನಮಗೊಂದು ಒಳ್ಳೆಯ ಅವಕಾಶ ಕೊಟ್ಟು ನೋಡಿ, ಆಗ ನಮ್ಮ ಪ್ರತಿಭೆಯನ್ನು ಸಾಬೀತು ಮಾಡುತ್ತೇವೆ’ ಎನ್ನುವ ಅವರು, ‘ನನಗೆ ನಟನೆ ಮುಖ್ಯ. ಅದರಾಚೆಯ ಆ್ಯಟಿಟ್ಯೂಡ್‌ಗಳನ್ನು ಎಂದಿಗೂ ತೋರಿಸಲ್ಲ. ನೀವು ನನಗೆ ಎಲೆ ಮೇಲೆ ಅನ್ನ ಹಾಕಿದರೂ ಕೂತು ತಿನ್ನುತ್ತೇನೆ. ಅದರ ಬಗ್ಗೆ ನಂಗೆ ಯಾವ ಬೇಜಾರೂ ಇಲ್ಲ. ಆದರೆ ಒಳ್ಳೆಯ ಅವಕಾಶ ಕೊಡಿ. ಯಾಕೆಂದರೆ ಸಿನಿಮಾ ನನಗೆ ಬರೀ ಫ್ಯಾಷನ್ ಅಲ್ಲ, ಅದು ನನ್ನ ಬದುಕು. ನನ್ನ ಹೊಟ್ಟೆಪಾಡೂ ಹೌದು’ ಎಂದು ತುಸು ಭಾವುಕರಾಗಿಯೇ ಹೇಳುತ್ತಾರೆ.

‘ನನಗೆ ಒಂದು ಒಳ್ಳೆಯ ಪಾತ್ರ ಸಿಗುವುದು ಯಾವಾಗ? ನನ್ನನ್ನು ಒಳ್ಳೆಯ ನಟಿ ಎಂದು ಜನರು ಗುರ್ತಿಸುವುದು ಯಾವಾಗ? ನನ್ನ ಕೈಗೆ ಒಂದುಪ್ರಶಸ್ತಿ ಬರುವುದು ಯಾವಾಗ?’ ಹೀಗೆ ದೇವರ ಮುಂದೆ ಅನುದಿನವೂ ಪ್ರಶ್ನೆಗಳ ಅರ್ಚನೆ ಮಾಡುತ್ತಿರುವ ಈ ಹಿತ್ತಿಲಗಿಡದ ಕಡೆಗೆ ಗಾಂಧಿನಗರ ಹೊರಳುಗಣ್ಣಾದರೂ ಹರಿಸಬೇಕಷ್ಟೆ. ■



# ಸತ್ಯಪ್ರಕಾಶ್ ಈಗ ಮ್ಯಾನ್ ಆಫ್ ದಿ ಮ್ಯಾಚ್

ಸತ್ಯಪ್ರಕಾಶ್ ಮತ್ತೆ ನಿರ್ದೇಶಕನ ಟೋಪಿ ತೊಟ್ಟು ಸೆಟ್‌ಗೆ ಇಳಿಯುತ್ತಿದ್ದಾರೆ. ಸತ್ಯಪ್ರಕಾಶ್ ಅವರ ಹೆಸರು, ‘ರಾಮಾ ರಾಮಾ ರೇ’ ಮತ್ತು ‘ಒಂದಲ್ಲಾ ಎರಡಲ್ಲಾ’ ಸಿನಿಮಾಗಳ ಜೊತೆಗೆ ಹೆಣೆದುಕೊಂಡಿದೆ. ಸದಭಿರುಚಿ ಮತ್ತು ಮನರಂಜನೆ ಎರಡರ ಅಪರೂಪದ ಹದ ಸಾಧಿಸಿರುವ ಇವರು, ಪಿಆರ್‌ಕೆ ಪ್ರೊಡಕ್ಷನ್ ಅಡಿಯಲ್ಲಿ ಒಂದು ಸಿನಿಮಾ ನಿರ್ದೇಶಿಸುತ್ತಿದ್ದಾರೆ ಎಂಬ ಸುದ್ದಿ ಕಳೆದ ವರ್ಷ ಹರಿದಾಡಿತ್ತು. ಆ ಸುದ್ದಿ ಎಷ್ಟು ನಿಜವೋ, ಆದರೆ ಈಗ ಅವರು ತಮ್ಮದೇ ನಿರ್ಮಾಣಸಂಸ್ಥೆ ‘ಸತ್ಯ ಪಿಕ್ಚರ್ಸ್’ ಅಡಿಯಲ್ಲಿ ಸಿನಿಮಾ ನಿರ್ದೇಶನಕ್ಕೆ ಇಳಿದಿರುವುದಂತೂ ಸತ್ಯವೇ. ಅವರ ಪ್ರಯತ್ನಕ್ಕೆ ಈ ಬಾರಿ, ‘ಮಯೂರ ಮೋಷನ್ ಪಿಕ್ಚರ್ಸ್’ನ ಮಂಜುನಾಥ ದಾಸೇಗೌಡ ಅವರೂ ಕೈ ಜೋಡಿಸುತ್ತಿದ್ದಾರೆ.

ವಿಭಿನ್ನ ವಿಷಯ, ವಸ್ತುಗಳುಳ್ಳ ಸಿನಿಮಾಗಳನ್ನು ಮಾಡಿ, ಚಿತ್ರಮಂದಿರಗಳು ಮತ್ತು ಓಟಿಟಿಗಳ ಮೂಲಕ ಪ್ರೇಕ್ಷಕರ ಮುಂದಿಡುವ ಯೋಚನೆ ಅವರದ್ದು. ಇದರ ಮೊದಲ ಹಂತವಾಗಿ ಇನ್ನೂ ಹೆಸರಿಡದ ಸಿನಿಮಾವೊಂದು ಸೆಟ್ಟೇರುತ್ತಿದೆ. ಈ ಚಿತ್ರದ ಮುಹೂರ್ತ ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ನಡೆದಿದ್ದು, ‘ಮ್ಯಾನ್ ಆಫ್ ದಿ ಮ್ಯಾಚ್’ ಎಂದು ಹೆಸರಿಡಲಾಗಿದೆ. ‘ರಾಮಾ ರಾಮಾ ರೇ’ ಸಿನಿಮಾದ ತಾಂತ್ರಿಕ ತಂಡವೇ ಇದರಲ್ಲಿಯೂ ಕೆಲಸ ಮಾಡಲಿದೆ. ಅಷ್ಟೇ ಅಲ್ಲ, ಆ ಸಿನಿಮಾದಲ್ಲಿ ನಟಿಸಿದ್ದ ನಟರಾಜ್ ಮತ್ತು ಧರ್ಮಣ್ಣ ಅವರೂ ಈ ಚಿತ್ರದ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಜೊತೆಗೆ ಹಲವು ಹೊಸಪ್ರತಿಭೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಮನರಂಜನೆಯ ರಸದೂಟಕ್ಕೆ ಭಂಗಬರದ ಹಾಗೆ ಹೊಸ ರೀತಿಯ ಪ್ರಯೋಗಕ್ಕೆ ಈ ಸಿನಿಮಾದ ಮೂಲಕ ಕೈ ಹಾಕಿದ್ದಾರಂತೆ ಸತ್ಯಪ್ರಕಾಶ್. ಚಿತ್ರದ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯನ್ನು ಅವರೇ ಬರೆದಿದ್ದು ಏಪ್ರಿಲ್‌ನಲ್ಲಿ ಚಿತ್ರೀಕರಣ ಪ್ರಾರಂಭಿಸುವ ಯೋಚನೆ ಚಿತ್ರತಂಡಕ್ಕಿದೆ. ಇಡೀ ಚಿತ್ರವನ್ನು ಕಂಠೀರವ ಸ್ಟುಡಿಯೊದಲ್ಲಿಯೇ ಚಿತ್ರೀಕರಿಸಿರುತ್ತಿರುವುದು ಈ ಚಿತ್ರದ ಇನ್ನೊಂದು ವಿಶೇಷ. ■

